ಸೇವೆಯ ಜೊತೆ ದೇಹದಲ್ಲಿ ಇರುತ್ತಾ ವಿದೇಹಿ ಸ್ಥಿತಿಯ ಅನುಭವವನ್ನು ಹೆಚ್ಚಿಸಿ

ಇಂದು ಬಾಪ್ದಾದಾರವರು ತನ್ನ ನಾಲ್ಕಾರು ಕಡೆಯ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ, ಏಕೆಂದರೆ ತಂದೆ ತಿಳಿದಿದ್ದಾರೆ- ನನ್ನ ಒಂದೊಂದು ಮಗುವು ಭಲೇ ಲಾಸ್ಟ್ ಪುರುಷಾರ್ಥಿಯಾಗಿದ್ದರೂ ಸಹ ವಿಶ್ವದಲ್ಲಿ ಶ್ರೇಷ್ಠಾತಿ ಶ್ರೇಷ್ಠ ಭಾಗ್ಯವಂತರಾಗಿದ್ದಾರೆ ಏಕೆಂದರೆ ಭಾಗ್ಯವಿದಾತ ತಂದೆಯನ್ನು ತಿಳಿದು, ಗುರುತಿಸಿ ಭಾಗ್ಯವಿದಾತನ ಡೈರೆಕ್ಟ್(ನೇರವಾದ) ಮಕ್ಕಳಾಗಿ ಬಿಟ್ಟಿದ್ದಾರೆ. ಇಂತಹ ಭಾಗ್ಯ ಇಡೀ ಕಲ್ಪದಲ್ಲಿ ಯಾವುದೇ ಆತ್ಮನಿಗೂ ಇಲ್ಲ, ಇರಲು ಸಾಧ್ಯವಿಲ್ಲ. ಜೊತೆ ಜೊತೆ ಇಡೀ ವಿಶ್ವದಲ್ಲಿ ಎಲ್ಲರಿಗಿಂತ ಸಂಪತ್ತಿವಂತ ಹಾಗೂ ಧನವಂತ ಬೇರೆ ಯಾರು ಸಹ ಇರಲು ಸಾಧ್ಯವಿಲ್ಲ. ಭಲೆ ಎಷ್ಟಾದರೂ ಪದಮಪತಿ ಆಗಿರಲಿ ಆದರೆ ನೀವು ಮಕ್ಕಳ ಖಜಾನೆ ಯೊಂದಿಗೆ ಯಾವುದೇ ಹೋಲಿಕೆಯನ್ನು ಮಾಡಲು ಸಾಧ್ಯವಿಲ್ಲ ಏಕೆಂದರೆ ಮಕ್ಕಳ ಪ್ರತಿಯೊಂದು ಹೆಜ್ಜೆಯಲ್ಲಿ ಪದಮಗಳ ಸಂಪಾದನೆ ಇದೆ. ಇಡೀ ದಿನದಲ್ಲಿ ಪ್ರತಿ ದಿನ ಭಲೇ ಒಂದೆರಡು ಹೆಜ್ಜೆಯೂ ಸಹ ತಂದೆಯ ನೆನಪಿನಲ್ಲಿ ಇರುತ್ತೀರಿ ಅಥವಾ ಹೆಜ್ಜೆಯನ್ನು ತೆಗೆದುಕೊಳ್ಳುತ್ತೀರಿ, ಎಂದರೆ ಪ್ರತಿಯೊಂದು ಹೆಜ್ಜೆಯಲ್ಲಿ ಪದಮ... ಎಂದ ಮೇಲೆ ಇಡೀ ದಿನದಲ್ಲಿ ಎಷ್ಟು ಪದಮಗಳು ಜಮಾ ಆಯಿತು? ಯಾರಾದರೂ ಇಂತಹವರು ಇದ್ದಾರಾ ಯಾರು ಒಂದು ದಿನದಲ್ಲಿ ಪಧಮದ ಸಂಪಾದನೆ ಮಾಡುವವರು? ಆದ್ದರಿಂದ ಬಾಪ್ದಾದಾರವರು ಹೇಳುತ್ತಾರೆ ಒಂದು ವೇಳೆ ಭಾಗ್ಯವಂತರನ್ನು ನೋಡಬೇಕೆಂದರೆ ಅಥವಾ ಪ್ರಪಂಚದಲ್ಲಿ ಎಲ್ಲರಿಗಿಂತ ಶ್ರೀಮಂತ ಆತ್ಮರನ್ನು ನೋಡಬೇಕೆಂದರೆ ತಂದೆಯ ಮಕ್ಕಳನ್ನು ನೋಡಿ.

ನೀವು ಮಕ್ಕಳ ಬಳಿ ಕೇವಲ ಒಂದು ಸ್ಥೂಲ ಧನದ ಖಜಾನೆ ಅಲ್ಲ, ಅವರಂತೂ ಕೇವಲ ಧನದಿಂದ ಶ್ರೀಮಂತರಾಗಿದ್ದಾರೆ ಹಾಗೂ ನೀವು ಮಕ್ಕಳು ಎಷ್ಟು ಖಜಾನೆಗಳಿಂದ ಸಂಪನ್ನರಾಗಿದ್ದೀರಿ! ಖಜಾನೆಗಳ ಲಿಸ್ಟ್ ತಿಳಿದುಕೊಂಡಿದ್ದೀರಲ್ಲವೇ? ಈ ಸ್ಥೂಲ ಧನವಂತು ಯಾವುದೇ ದೊಡ್ಡ ಮಾತಲ್ಲ ಆದರೆ ನಿಮ್ಮ ಬಳಿ ಯಾವ ಜ್ಞಾನದ ಖಜಾನೆ, ಶಕ್ತಿಗಳ ಖಜಾನೆ, ಸರ್ವ ಗುಣಗಳ ಖಜಾನೆ, ಖುಷಿಯ ಖಜಾನೆ ಹಾಗೂ ಸರ್ವರಿಗೂ ಸುಖ ಶಾಂತಿಯ ಮಾರ್ಗವನ್ನು ಹೇಳುವುದರಿಂದ ಯಾವ ಆಶೀರ್ವಾದಗಳ ಖಜಾನೆ ಸಿಗುತ್ತದೆ, ಈ ಅವಿನಾಶಿ ಖಜಾನೆಗಳು ಪರಮಾತ್ಮ ಮಕ್ಕಳ ಹೊರತು ಬೇರೆ ಯಾರ ಬಳಿಯೂ ಅವಿನಾಶಿಯಾಗಿ ಇಲ್ಲ. ಎಂದ ಮೇಲೆ ಬಾಪ್ದಾದಾರವರಿಗೆ ಇಂತಹ ಖಜಾನೆಗಳ ಮಾಲೀಕ ಮಕ್ಕಳ ಮೇಲೆ ಎಷ್ಟು ಆತ್ಮೀಯ ಗರ್ವ ಇದೆ. ಬಾಪ್ದಾದಾರವರು ಸದಾ ಮಕ್ಕಳನ್ನು ಈ ರೀತಿ ಸಂಪನ್ನವಾಗಿ ನೋಡಿ ಇದೇ ಗೀತೆಯನ್ನು ಹಾಡುತ್ತಾರೆ ವಾಹ್ ಮಕ್ಕಳೇ! ನಿಮಗೂ ಸಹ ತಮ್ಮ ಮೇಲೆ ಇಷ್ಟು ಆತ್ಮೀಯ ಗರ್ವ ಅರ್ಥಾತ್ ನಶೆ ಇದೆ ಅಲ್ಲವೇ! ಕೈಯಿಂದ ಚಪ್ಪಾಳೆಯನ್ನು ಹೊಡೆಯಬಹುದು. (ಎಲ್ಲರೂ ಚಪ್ಪಾಳೆ ಹೊಡೆದರು) ಎರಡು ಕೈಗಳಿಗೂ ಏಕೆ ಕಷ್ಟವನ್ನು ಕೊಡುತ್ತೀರಿ, ಒಂದು ಕೈಯಿಂದ ಚಪ್ಪಾಳೆ ಹೊಡೆಯಿರಿ. ಒಂದು ಕೈಯಿಂದ ಚಪ್ಪಾಳೆ ಹೊಡೆಯುವುದು ಬರುತ್ತದೆ ಅಲ್ಲವೇ! ಬ್ರಾಹ್ಮಣರ ಎಲ್ಲದೂ ಸಹ ಭಿನ್ನವಾಗಿದೆ. ಬ್ರಾಹ್ಮಣರು ಶಾಂತಿ ಪ್ರಿಯರಾಗಿದ್ದಾರೆ ಆದ್ದರಿಂದ ಚಪ್ಪಾಳೆಯೂ ಸಹ ಶಾಂತಿಯ ಚಪ್ಪಾಳೆ ಸರಿಯಾಗಿದೆ. ಹಾಗಾದರೆ ನಶೆಯಂತೂ ಎಲ್ಲರಿಗೂ ಸದಾ ಇದೆ ಮುಂದೆಯೂ ಇರುತ್ತದೆ. ನಿಶ್ಚಿತ ವಾಗಿದೆ.

ಬಾಪ್ದಾದಾರವರು ಸಮಯದ ಪರಿವರ್ತನೆಯ ಗತಿಯನ್ನು ನೋಡಿ ಮಕ್ಕಳ ಪುರುಷಾರ್ಥದ ವೇಗವನ್ನು ಸಹ ನೋಡುತ್ತಿದ್ದರು. ಬಾಪ್ದಾದಾರವರು ಪ್ರತಿಯೊಂದು ಮಗುವಿನ ಜೀವನವನ್ನು ಜೀವನ ಮುಕ್ತ ಸ್ಥಿತಿಯಲ್ಲಿ ಸದಾ ನೋಡಲು ಬಯಸುತ್ತಾರೆ. ಇದು ನಿಮ್ಮೆಲ್ಲರ ಚಾಲೆಂಜ್ ಆಗಿದೆ- ತಂದೆಯಿಂದ ಮುಕ್ತಿ ಜೀವನ್ ಮುಕ್ತಿಯ ಆಸ್ತಿಯನ್ನು ಬಂದು ತೆಗೆದುಕೊಳ್ಳಿ. ಆದರೆ ನಿಮಗಂತೂ ಮುಕ್ತಿ ಹಾಗೂ ಜೀವನ್ ಮುಕ್ತಿಯ ಆಸ್ತಿ ಸಿಕ್ಕಿ ಬಿಟ್ಟಿದೆ ಅಲ್ಲವೇ? ಅಥವಾ ಸಿಕ್ಕಿಲ್ಲವೇ?( ಸಿಕ್ಕಿದೆ) ಸತ್ಯುಗದಲ್ಲಿ ಅಥವಾ ಮುಕ್ತಿ ಧಾಮದಲ್ಲಿ ಮುಕ್ತಿಯ ಅಥವಾ ಜೀವನ್ ಮುಕ್ತಿಯ ಅನುಭವವನ್ನು ಮಾಡಲು ಸಾಧ್ಯವಿಲ್ಲ. ಮುಕ್ತಿ ಜೀವನ್ ಮುಕ್ತಿಯ ಆಸ್ತಿಯ ಅನುಭವ ಈಗ ಸಂಗಮ ದಲ್ಲಿಯೇ ಮಾಡಬೇಕು. ಜೀವನದಲ್ಲಿ ಇರುತ್ತಾ, ಸಮಯ ಸೂಕ್ಷ್ಮವಾಗುತ್ತಿದ್ದಂತೆ, ಪರಿಸ್ಥಿತಿಗಳು, ಸಮಸ್ಯೆಗಳು, ವಾಯುಮಂಡಲ ಡಬಲ್ ದೂಷಿತ ಆಗುತ್ತಿದ್ದರೂ ಸಹ ಇವರು ಎಲ್ಲಾ ಪ್ರಭಾವಗಳಿಂದ ಮುಕ್ತ, ಜೀವನದಲ್ಲಿ ಇರುತ್ತಾ ಈ ಎಲ್ಲಾ ಭಿನ್ನ-ಭಿನ್ನ ಬಂಧನಗಳಿಂದ ಮುಕ್ತ. ಒಂದು ಸೂಕ್ಷ್ಮ ಬಂಧನವೂ ಇರದಿರಲಿ- ಇಂತಹ ಜೀವನ ಮುಕ್ತ ಆಗಿದ್ದೀರಾ ಅಥವಾ ಅಂತ್ಯದಲ್ಲಿ ಆಗುತ್ತೀರಾ? ಈಗ ಆಗುತ್ತೀರಾ ಅಥವಾ ಅಂತ್ಯದಲ್ಲಿ ಆಗುತ್ತೀರಾ? ಯಾರು ತಿಳಿಯುತ್ತೀರಿ ಅಂತ್ಯದಲ್ಲಿ ಆಗುವ ಬದಲಾಗಿ ಈಗ ಆಗಬೇಕು, ಅಥವಾ ಆಗಿದ್ದೀರಿ ಅಥವಾ ಆಗಲೇಬೇಕು, ಅವರು ಕೈ ಎತ್ತಿ?( ಎಲ್ಲರೂ ಕೈ ಎತ್ತಿದರು) ಎರಡರಲ್ಲಿಯೂ ಮಿಕ್ಸ್(ಮಿಶ್ರವಾಗಿ) ಕೈ ಎತ್ತುತ್ತಿದ್ದಾರೆ, ಚತುರರಾಗಿದ್ದೀರಿ. ಭಲೇ ಚತುರತೆಯನ್ನು ಮಾಡಿ. ಆದರೆ ಬಾಪ್ದಾದಾರವರು ಈಗಿನಿಂದಲೇ ಸ್ಪಷ್ಟವಾಗಿ ಹೇಳುತ್ತಿದ್ದಾರೆ, ಅಟೆಂಷನ್ ಪ್ಲೀಸ್( ದಯವಿಟ್ಟು ಗಮನಿಸಿ) ತಂದೆ ಪ್ರತಿಯೊಬ್ಬ ಬ್ರಾಹ್ಮಣ ಮಗುವನ್ನು ಸಹ ಬಂಧನ ಮುಕ್ತ, ಜೀವನ ಮುಕ್ತ ಮಾಡಲೇಬೇಕು. ಭಲೇ ಯಾವುದೇ ವಿಧಿಯಿಂದ, ಆದರೆ ಅವಶ್ಯವಾಗಿ ಮಾಡಬೇಕು. ತಿಳಿದಿದ್ದೀರಲ್ಲವೇ ಯಾವ ವಿಧಿಗಳಿವೆ ಎಂದು? ಇಷ್ಟು ಚತುರರಂತೂ ಆಗಿದ್ದೀರಲ್ಲವೇ! ಹಾಗಾದರೆ ನೀವು ಆಗಲೇ ಬೇಕಾಗಿದೆ. ಬಯಸಿ, ಬಯಸದಿರಿ ಆದರೆ ಆಗಲೇ ಬೇಕಾಗಿದೆ. ನಂತರ ಏನು ಮಾಡುವಿರಿ( ಈಗಿನಿಂದಲೇ ಆಗುತ್ತೇವೆ) ನಿಮ್ಮ

ಮುಖದಲ್ಲಿ ಗುಲಾಬ್ ಜಾಮೂನ್. ಎಲ್ಲರ ಮುಖದಲ್ಲಿ ಗುಲಾಬ್ ಜಾಮೂನ್ ಬಂದುಬಿಟ್ಟಿತು ಅಲ್ಲವೇ. ಆದರೆ ಇದು ಗುಲಾಬ್ ಜಾಮೂನ್ ಆಗಿದೆ- ಈಗಲೇ ಬಂದನ ಮುಕ್ತ ಆಗುವುದಕ್ಕಾಗಿ. ಹಾಗೆ ಸುಮ್ಮನೆ ಗುಲಾಬ್ ಜಾಮೂನ್ ತಿಂದುಬಿಡಬೇಡಿ.

ಹಾಲಿನ ಶೋಭೆ ಬಹಳ ಚೆನ್ನಾಗಿದೆ. ಮಾಲೆಯಂತೆ ಎನಿಸುತ್ತಿದೆ. ಇಲ್ಲಿಂದ ಬಂದು ನೋಡಿದರೆ ಮಾಲೆಯಂತೆ ಎನಿಸುತ್ತದೆ. ಈ ಕುರ್ಚಿಯವರ ಮಾಲೆ ತಯಾರಾಗಿಬಿಟ್ಟಿದೆ. ಚೆನ್ನಾಗಿದೆ. ಕಾರಣ- ಅಕಾರಣ ಹೇಗೆ ಈಗ ಕುರ್ಚಿಯನ್ನು ತೆಗೆದುಕೊಂಡಿದ್ದೀರಿ ಇದೇ ರೀತಿ ಯಾವಾಗ ಬಾಪ್ದಾದಾರವರು ಫೈನಲ್ ಸಮಯ ಪ್ರಮಾಣ ಸಿಟಿ ಹೊಡೆಯುತ್ತಾರೆ- ಜೀವನ್ ಮುಕ್ತಿಯ ಕುರ್ಚಿಯ ಮೇಲೆ ಕುಳಿತುಕೊಂಡು ಬಿಡಿ ಎಂದು, ಆಗ ಸಹ ಕುಳಿತುಕೊಳ್ಳುತ್ತೀರಾ ಅಥವಾ ಕೇವಲ ಈಗ ಕುರ್ಚಿಯ ಮೇಲೆ ಕುಳಿತುಕೊಂಡಿದ್ದೀರಾ? ಹೀಗಲ್ಲ ಧರಣಿಯ ಮೇಲೆ ಕುಳಿತುಕೊಂಡಿರುವವರು ಕುರ್ಸಿಯನ್ನು ತೆಗೆದುಕೊಳ್ಳುವುದಿಲ್ಲ, ಮೊದಲು ನೀವು, ಧರಣಿಯ ಮೇಲೆ ಕುಳಿತುಕೊಳ್ಳುವುದು ಇದು ತಪಸ್ಸಿನ ಚಿನ್ಹೆಯಾಗಿದೆ. ಆರೋಗ್ಯವಂತರ ಚಿಹ್ನೆಯಾಗಿದೆ. ಆರೋಗ್ಯವು ಇದೆ, ತಪಸ್ಸಿನ ಮೂಲಕ ಖಜಾನೆಗಳ ಐಶ್ವರ್ಯವು ಇದೆ ಎಂದ ಮೇಲೆ ಎಲ್ಲಿ ಆರೋಗ್ಯ ಇದೆ, ಐಶ್ವರ್ಯ ಇದೆ ಅಲ್ಲಿ ಖುಷಿಯಂತೂ ಇದ್ದೇ ಇರುತ್ತದೆ. ಚೆನ್ನಾಗಿದೆ- ಆರೋಗ್ಯವಂತರು, ಐಶ್ವರ್ಯವಂತರು ಆಗಿದ್ದೀರಿ.

ಅಂದಮೇಲೆ ಬಾಪ್ದಾದಾರವರು ಇಂದು ನೋಡುತ್ತಿದ್ದರು- ಮಕ್ಕಳ ಮೂರು ಪ್ರಕಾರದ ಸ್ಥಿತಿಗಳಿವೆ. ಒಂದಾಗಿದೆ ಪುರುಷಾರ್ತಿ, ಇದರಲ್ಲಿ ಪುರುಷಾರ್ಥಿಯು ಇದ್ದಾರೆ ಹಾಗೂ ತೀವ್ರ ಪುರುಷಾರ್ಥಿಯೂ ಇದ್ದಾರೆ. ಎರಡನೆಯದಾಗಿದೆ- ಯಾರು ಪುರುಷಾರ್ಥದ ಪ್ರಾರಬ್ಧ ಜೀವನ್ ಮುಕ್ತಿ ಅವಸ್ಥೆಯ ಸ್ಥಿತಿಯನ್ನು ಅನುಭವ ಮಾಡುತ್ತಿದ್ದಾರೆ. ಆದರೆ ಕೊನೆಯ ಸಂಪೂರ್ಣ ಸ್ಥಿತಿ ಆಗಿದೆ- ದೇಹದಲ್ಲಿ ಇದ್ದರೂ ಸಹ ವಿದೇಹಿ ಅವಸ್ಥೆಯ ಅನುಭವ. ಎಂದ ಮೇಲೆ ಮೂರು ಸ್ಥಿತಿಗಳನ್ನು ನೋಡಿದರು. ಪುರುಷಾರ್ಥದ ಸ್ಥಿತಿಯಲ್ಲಿ ಜಾಸ್ತಿ ಸಂಖ್ಯೆಯನ್ನು ನೋಡಿದರು. ಜೀವನ ಮುಕ್ತಿಯ ಪ್ರಾರಬ್ಧ, ಸೇವಾಕೇಂದ್ರದ ನಿಮಿತ್ತರಾಗುವುದು, ಅಥವಾ ಒಳ್ಳೆಯ ಭಾಷಣ ಮಾಡುವವರಾಗುವುದು ಅಥವಾ ಡ್ರಾಮ ಅನುಸಾರ ಬೇರೆ ಬೇರೆ ವಿಶೇಷ ಸೇವೆಯಲ್ಲಿ ನಿಮಿತ್ತರಾಗುವುದು ಅಲ್ಲ, ಇದು ಪ್ರಾರಬವಲ್ಲ... ಇದಂತೂ ಲಿಫ್ಟ್ ಆಗಿದೆ ಇನ್ನಷ್ಟು ಮುಂದೆ ಹೋಗುವುದಕ್ಕಾಗಿ, ಸರ್ವರ ಮೂಲಕ ಆಶೀರ್ವಾದಗಳನ್ನು ಪಡೆದುಕೊಳ್ಳುವುದಕ್ಕಾಗಿ ಆದರೆ ಪ್ರರಬ್ಧವಾಗಿದೆ ಜೀವನ್ ಮುಕ್ತಿ. ಯಾವುದೇ ಬಂಧನವಿರದಿರಲಿ ನೀವು ಒಂದು ಚಿತ್ರದಲ್ಲಿ ತೋರಿಸುತೀರಲ್ಲವೇ! ಸಾಧಾರಣ ಅಜ್ಞಾನಿ ಆತ್ಮವನ್ನು ಹಲವಾರು ಹಗ್ಗಗಳಿಂದ ಕಟ್ಟಿರುವಂತೆ ತೋರಿಸುತ್ತೀರಿ. ಅದಾಗಿದೆ ಅಜ್ಞಾನಿ ಆತ್ಮಗಳಿಗಾಗಿ ಕಬ್ಬಿಣದ ಸರಪಳಿ. ದೊಡ್ಡ ದೊಡ್ಡ ಬಂಧನಗಳಾಗಿವೆ. ಆದರೆ ಜ್ಞಾನಿತು ಆತ್ಮ ಮಕ್ಕಳಿಗೆ ಬಹಳ ಸೂಕ್ಷ್ಮ ಹಾಗೂ ಆಕರ್ಷಣೆ ಮಾಡುವಂತಹ . ದಾರಗಳಾಗಿವೆ. ಕಾಣಿಸುವಂತಹ ಕಬ್ಬಿಣದ ಸರಪಳಿ ಈಗಿಲ್ಲ. ಬಹಳ ಸೂಕ್ಷ್ಮವೂ ಆಗಿದೆ, ರಾಯಲ್ ಆಗಿದೆ. ಪರ್ಸನಾಲಿಟಿ (ವ್ಯಕ್ತಿತ್ವ) ವನ್ನು ಅನುಭವ ಮಾಡಿಸುವಂತಹದ್ದು ಆಗಿದೆ, ಆದರೆ ಆ ದಾರಗಳು ನೋಡಲು ಕಾಣಿಸುವುದಿಲ್ಲ, ತಮ್ಮ ಒಳ್ಳೆಯತನ ಎಂದು ಅನಿಸುತ್ತದೆ. ಆದರೆ ಅದು ಒಳ್ಳೆಯತನ ಆಗಿರುವುದಿಲ್ಲ, ಅವರಿಗೆ ಒಳ್ಳೆಯತನ ಎಂದು ಅನಿಸುತ್ತದೆ, ನಾನು ಬಹಳ ಒಳ್ಳೆಯವನು ಎಂದು ಅವರಿಗೆ ಅನಿಸುತ್ತದೆ. ನಾವು ಬಹಳ ಮುಂದುವರಿಯುತ್ತಿದ್ದೇವೆ ಎಂದು ಎನಿಸುತ್ತದೆ. ಬಾಪ್ದಾದರವರು ನೋಡುತ್ತಿದ್ದರು - ಈ ಜೀವನ ಬಂಧನದ ದಾರಗಳು ಮೆಜಾರಿಟಿ( ಬಹಳಷ್ಟು) ಆತ್ಮರಲ್ಲಿ ಇತ್ತು. ಭಲೇ ಒಂದಾಗಿರಲಿ, ಅಥವಾ ಅರ್ಧ ಆಗಿರಲಿ ಆದರೆ ಜೀವನ್ ಮುಕ್ತ ಬಹಳ ಬಹಳ ಕಡಿಮೆ ನೋಡಿದರು. ಬಾಪ್ದಾದಾರವರು ನೋಡುತ್ತಿದ್ದರು- ಲೆಕ್ಕದ ಅನುಸಾರ ಇದು ಎರಡನೆಯ ಸ್ಥಿತಿಯಾಗಿದೆ ಜೀವನ ಮುಕ್ತ, ಕೊನೆಯ ಸ್ಥಿತಿಯಂತೂ ಆಗಿದೆ- ದೇಹದಿಂದ ಭಿನ್ನ ವಿದೇಹೀ ತನ. ಈ ಸ್ಥಿತಿಗಾಗಿ ಹಾಗೂ ಯಾವ ಸ್ಥಿತಿಯನ್ನು ಹೇಳಿದೆವೋ ಅದಕ್ಕಾಗಿ ಬಹಳ ಬಹಳ ಗಮನ ಬೇಕಾಗಿದೆ. ಎಲ್ಲಾ ಮಕ್ಕಳು ಕೇಳುತ್ತಾರೆ 99 ಬರುತ್ತದೆ ಆಗ ಏನಾಗುವುದು? ಏನು ಮಾಡಬೇಕು? ಏನು ಮಾಡಲಿ, ಏನು ಮಾಡಬಾರದು?

ಬಾಪ್ದಾದಾರವರು ಹೇಳುತ್ತಾರೆ 99ರ ಚಕ್ರವನ್ನು ಬಿಡಿ, ಈಗಿನಿಂದ ವಿದೇಹಿ ಸ್ಥಿತಿಯ ಬಹಳ ಅನುಭವ ಬೇಕಾಗಿದೆ. ಏನೆಲ್ಲಾ ಪರಿಸ್ಥಿತಿಗಳು ಬರುತ್ತಿದೆ ಹಾಗೂ ಬರುವುದಿದೆ ಅದರಲ್ಲಿ ವಿದೇಹಿ ಸ್ಥಿತಿಯ ಅಭ್ಯಾಸ ಬಹಳ ಬೇಕಾಗಿದೆ. ಆದ್ದರಿಂದ ಬೇರೆ ಎಲ್ಲಾ ಮಾತುಗಳನ್ನು ಬಿಟ್ಟು, ಹೀಗಾಗಿ ಬಿಟ್ಟರೆ, ಹೀಗಾಗಿ ಬಿಟ್ಟರೆ. ಏನಾಗುವುದು, ಈ ಪ್ರಶ್ನೆಗಳನ್ನು ಬಿಟ್ಟುಬಿಡಿ. ವಿದೇಹಿತನದ ಅಭ್ಯಾಸ ಮಾಡುವ ಮಕ್ಕಳಿಗೆ ಯಾವುದೇ ಪರಿಸ್ಥಿತಿ ಹಾಗೂ ಯಾವುದೇ ಏರುಪೇರು ಪ್ರಭಾವ ಮಾಡಲು ಸಾಧ್ಯವಿಲ್ಲ. ಭಲೆ ಪ್ರಕೃತಿಯ ಐದು ತತ್ವಗಳು ಚೆನ್ನಾಗಿ ಏರುಪೇರಿನಲ್ಲಿ ತರುವ ಪ್ರಯತ್ನ ಪಟ್ಟರು ಸಹ ವಿದೇಹಿ ಸ್ಥಿತಿಯ ಅಭ್ಯಾಸಿ ಆತ್ಮ ಅಚಲ-ಅಡೋಲ ಪಾಸ್ ವಿತ್ ಆನರ್( ಗೌರವಾನ್ವಿತ ತೇರ್ಗಡೆ) ಆಗುವ ಪುರಾವೆಯಾಗಿರುವುದು. ಬಾಪ್ದಾದಾರವರು ಸಮಯ ಪ್ರತಿ ಸಮಯ ಸೂಚನೆಯನ್ನು ಸಹ ಕೊಡುತ್ತಿದ್ದಾರೆ ಹಾಗೂ ಕೊಡುತ್ತಿರುತ್ತಾರೆ. ನೀವು ಯೋಚಿಸುತ್ತೀರಿ, ಯೋಜನೆಯನ್ನು ಸಹ ತಯಾರು ಮಾಡುತ್ತೀರಿ, ಮಾಡಿರಿ . ಭಲೇ ಯೋಚಿಸಿ ಆದರೆ ಏನಾಗುತ್ತದೆ ಎಂದರೆ... ಆಶ್ಚರ್ಯವತರಾಗಿ ಅಲ್ಲ. ವಿದೇಹಿ, ಸಾಕ್ಷಿ ಆಗಿ ಯೋಚಿಸಿ, ಆದರೆ ಯೋಚಿಸಿರಿ, ಯೋಜನೆ ಮಾಡಿರಿ ಹಾಗೂ ಕ್ಷಣದಲ್ಲಿ ಯೋಜನೆಯ ಸ್ಥಿತಿಯನ್ನು ಮಾಡುತ್ತಾ ನಡೆಯಿರಿ. ಈಗ ಸ್ಥಿತಿಯ ಅವಶ್ಯಕತೆ ಇದೆ. ಈ ವಿದೇಹಿ ಸ್ಥಿತಿಯಿಂದ ಪರಿಸ್ಥಿತಿಗಳನ್ನು ಸಹಜವಾಗಿ ಪಾರು ಮಾಡಬಹುದಾಗಿದೆ. ಮೋಡಗಳು ಬಂದವು, ಹಾಗೂ ಹೊರಟು ಹೋದವು ಎಂದಂತೆ. ಹಾಗೂ ವಿದೇಹಿ, ಅಚಲ-ಅಡೋಲ ರಾಗಿ ಆಟವನ್ನು ನೋಡುತ್ತಿದ್ದೀರಿ. ಈಗ ಅಂತಿಮ ಸಮಯವನ್ನು ಯೋಚಿಸುತ್ತೀರಿ ಆದರೆ ಅಂತಿಮ ಸ್ಥಿತಿಯನ್ನು ಯೋಚಿಸಿ.

ನಾಲ್ಕಾರು ಕಡೆಯ ಸೇವೆಯ ಸಮಾಚಾರ ಬಾಪ್ದಾದಾರವರು ಕೇಳುತ್ತ ಇರುತ್ತಾರೆ ಹಾಗೂ ಹೃದಯದಿಂದ ಎಲ್ಲಾ ವಿಶ್ರಾಂತರಹಿತ ಸೇವಾದಾರಿಗಳಿಗೆ ಶುಭಾಶಯಗಳನ್ನು ಸಹ ಕೊಡುತ್ತಾರೆ, ಸೇವೆಯನ್ನು ಬಹಳ ಉಮಂಗ- ಉತ್ಸಾಹದಿಂದ ಮಾಡುತ್ತೀರುವಿರಿ, ಹಾಗೂ ಮುಂದೆಯೂ ಮಾಡುತ್ತಾ ಹೋಗಿ ಆದರೆ ಸೇವೆ ಹಾಗೂ ಸ್ಥಿತಿಯ ಸಮತೋಲನ, ಸ್ವಲ್ಪ ಎಂದಾದರೂ ಈ ಕಡೆ ಬಾಗಿ ಹೋಗುತ್ತದೆ, ಕೆಲವು ಬಾರಿ ಇನ್ನೊಂದು ಕಡೆ ಬಾಗುತ್ತದೆ ಆದ್ದರಿಂದ ಬಹಳ ಸೇವೆ ಮಾಡಿ, ಬಾಪ್ದಾದಾರವರು ಸೇವೆಗಾಗಿ ನಿರಾಕರಿಸುವುದಿಲ್ಲ, ಇನ್ನಷ್ಟು ಜೋರಾಗಿ ಮಾಡಿ ಆದರೆ ಸೇವೆ ಹಾಗೂ ಸ್ಥಿತಿಯ ಸದಾ ಸಮತೋಲನವನ್ನು ಇಡುತ್ತಾ ನಡೆಯಿರಿ. ಸ್ಥಿತಿಯನ್ನು ಮಾಡಿಕೊಳ್ಳುವುದರಲ್ಲಿ ಸ್ವಲ್ಪ ಪರಿಶ್ರಮ ಹಿಡಿಸುತ್ತದೆ ಹಾಗೂ ಸೇವೆಯಂತು ಸಹಜವಾಗಿ ಆಗುತ್ತದೆ, ಆದ್ದರಿಂದ ಸೇವೆಯ ಬಲ ಸ್ವಲ್ಪ ಸ್ಥಿತಿಗಿಂತ ಜಾಸ್ತಿ ಆಗಿ ಹೋಗುತ್ತದೆ. ಸಮತೋಲನವನ್ನು ಇಡೀ ಹಾಗೂ ಬಾಪ್ದಾದಾರವರ, ಸರ್ವ ಸೇವೆ ಮಾಡುವಂತಹ ಆತ್ಮಗಳ, ಸಂಬಂಧ- ಸಂಪರ್ಕದಲ್ಲಿ ಬರುವಂತಹ ಬ್ರಾಹ್ಮಣ ಪರಿವಾರದ ಆಶೀರ್ವಾದಗಳನ್ನು ಪಡೆಯುತ್ತಾ ನಡೆಯಿರಿ. ಈ ಆಶೀರ್ವಾದಗಳ ಖಾತೆ ಬಹಳ ಜಮಾ ಮಾಡಿ. ಈಗಿನ ಆಶೀರ್ವಾದಗಳ ಖಾತೆ ನೀವು ಆತ್ಮಗಳಲ್ಲಿ ಇಷ್ಟು ಸಂಪನ್ನವಾಗಿರಲಿ ಯಾವುದರಿಂದ ದ್ವಾಪರದಿಂದ ನಿಮ್ಮ ಚಿತ್ರಗಳ ಮೂಲಕ ಎಲ್ಲರಿಗೂ ಆಶೀರ್ವಾದಗಳು ಸಿಗುತ್ತಾ ಇರುವುದು. ಅನೇಕ ಜನ್ಮಗಳಲ್ಲಿ ಆಶೀರ್ವಾದಗಳನ್ನು ಕೊಡಬೇಕಾಗಿದೆ ಆದರೆ ಜಮಾ ಒಂದೇ ಜನ್ಮದಲ್ಲಿ ಮಾಡಬೇಕಾಗಿದೆ ಆದ್ದರಿಂದ ಏನು ಮಾಡುವಿರಿ? ಸ್ಥಿತಿಯನ್ನು ಸದಾ ಮುಂದಿಟ್ಟುಕೊಂಡು ಸೇವೆಯಲ್ಲಿ ಮುಂದುವರೆಯುತ್ತಾ ಹೋಗಿ. ಏನಾಗುವುದು, ಈ ರೀತಿ ಯೋಚಿಸಬೇಡಿ. ಬ್ರಾಹ್ಮಣ ಆತ್ಮರಿಗಾಗಿ ಒಳ್ಳೆಯದಾಗಿದೆ, ಒಳ್ಳೆಯದೇ ಆಗಲಿದೆ. ಆದರೆ ಸಮತೋಲನವನ್ನು ಇಟ್ಟುಕೊಂಡವರಿಗೆ ಸದಾ ಒಳ್ಳೆಯದೇ ಆಗುತ್ತದೆ. ಸಮತೋಲನ ಕಡಿಮೆ ಇದ್ದರೆ ಕೆಲವೊಮ್ಮೆ ಒಳ್ಳೆಯದು, ಕೆಲವೊಮ್ಮೆ ಸ್ವಲ್ಪ ಒಳ್ಳೆಯದು. ಕೇಳಿಸಿಕೊಂಡಿರೆ? ಏನು ಮಾಡಬೇಕು ಎಂದು? ಪ್ರಶ್ನಾರ್ಥಕ ಚಿಹ್ನೆ ಯೋಚಿಸುವ ಲೆಕ್ಕಕ್ಕಿಂತ ಆಶ್ಚರ್ಯವಂತರಾಗಿ ಯೋಚಿಸುವುದನ್ನು ಸಮಾಪ್ತಿ ಮಾಡಿ, ಈ ರೀತಿ ಅಂತೂ ಆಗುವುದಿಲ್ಲ ಅಲ್ಲವೇ, ಹೀಗಂತೂ ಆಗುವುದಿಲ್ಲ ಅಲ್ಲವೇ.. ಇದು ಸ್ಥಿತಿಯನ್ನು ಮೇಲೆ ಕೆಳಗೆ ಮಾಡುತ್ತದೆ, ತಿಳಿಯಿತೇ.

ಒಳ್ಳೆಯದು - ವಿದೇಶಿಯರ ಗುಂಪು ಎದ್ದೇಳಿ. ವಿದೇಶಿಯವರಲ್ಲಿಯೂ ಸಹ ಒಂದು ವಿಶೇಷತೆ ಬಾಪ್ದಾದಾರವರಿಗೆ ಬಹಳ ಒಳ್ಳೆಯದೆನಿಸುತ್ತದೆ. ಅದು ಯಾವುದು? ಎಲ್ಲರಲ್ಲಿಯೂ ಬಹಳ ಉಮಂಗ ಉತ್ಸಾಹವಿದೆ- ವಿದೇಶದ ಕೋಣೆ ಕೋಣೆಯಲ್ಲಿಯೂ ತಂದೆಯ ಸ್ಥಾನವನ್ನು ನಿರ್ಮಾಣ ಮಾಡಬೇಕು ಹಾಗೂ ಮಾಡಿಯೂ ಇದ್ದಾರೆ. ಈ ವರ್ಷ ಎಷ್ಟು ಹೊಸ ಸ್ಥಾನಗಳನ್ನು ನಿರ್ಮಾಣ ಮಾಡಿದ್ದೀರಿ? (12- 15) ಸಂದೇಶ ನಾಲ್ಕಾರು ಕಡೆ ಸಿಗಲಿ ಎಂಬ ಒಳ್ಳೆಯ ಉಮಂಗವಿದೆ. ಈ ಲಕ್ಷ್ಯ ಬಹಳ ಚೆನ್ನಾಗಿದೆ. ಎಲ್ಲಿ ಹೋದರೂ ಅಲ್ಲಿ ಯಾರನ್ನಾದರೂ ನಿಮಿತ್ತರನ್ನಾಗಿ ಮಾಡುವ ಸೇವೆಯ ಲಕ್ಷ್ಯ ಚೆನ್ನಾಗಿ ಇಡುತ್ತಾರೆ. ಈ ವಿಶೇಷತೆ ಇದೆ. ಪ್ರತಿಯೊಬ್ಬರೂ ಎಷ್ಟಾಗುತ್ತದೆಯೋ ಅಷ್ಟು ತನ್ನನ್ನು ನಿಮ್ಮ ಬಳಿ ಸೇವೆಗೆ ನಿಮಿತ್ತರನ್ನಾಗಿ ಮಾಡುವ ಆಫರ್ (ನೀಡುವುದು) ಸಹ ಮಾಡುತ್ತಾರೆ ಹಾಗೂ ಪ್ರಾಕ್ಟಿಕಲ್ ನಲ್ಲಿಯೂ ಸಹ ಮಾಡುತ್ತಾರೆ. ಮನೆ ಮನೆಯಲ್ಲಿಯೂ ಸಹ ಬಾಬಾರವರ ಮನೆ ಇರಲಿ ಎಂದು ಯೋಚಿಸುತ್ತಾರೆ. ಈ ಉಮಂಗ ಉತ್ಸಾಹ ಬಹಳ ಚೆನ್ನಾಗಿದೆ ಆದ್ದರಿಂದ ಈ ಉಮ್ಮಂಗ ಉತ್ಸಾಹಕ್ಕಾಗಿ ಬಾಪ್ದಾದಾರವರು ಅಡ್ವಾನ್ಸ್ (ಮೊದಲೇ) ಮುಂದುವರೆಯುವುದಕ್ಕಾಗಿ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಬಾಪ್ದಾದಾರವರು ವಿದೇಶಿ ಅರ್ಥಾತ್ ವಿಶ್ವಕಲ್ಯಾಣದಲ್ಲಿ ನಿಮಿತ್ತರಾಗುವ ಮಕ್ಕಳಿಗೆ ಇದನ್ನೇ ಹೇಳುತ್ತಾರೆ- ಈಗ ಸೇವೆ ಹಾಗೂ ವಿದೇಹೀ ಅವಸ್ಥೆಯಲ್ಲಿ ನಂಬರ್ ವನ್ ವಿದೇಶಿ ಮಕ್ಕಳು ಆಗಲೇಬೇಕು. ಆಗಬೇಕೆ? ಯಾವಾಗ? 99ರಲ್ಲಿ ಅಥವಾ ಎರಡು ಸಾವಿರದಲ್ಲಿ ಆಗುವಿರಾ? ಯಾವಾಗ ಅಲ್ಲ ಈಗ. ಅವ್ಯಕ್ತ ತಂದೆಯ ಪಾಲನೆಯ ಪ್ರತ್ಯಕ್ಷ ಸಾಕ್ಷಿಯನ್ನು ಕೊಡಬೇಕು. ಹೇಗೆ ಬ್ರಹ್ಮಾ ತಂದೆ ಅವ್ಯಕ್ತರಾಗಿ ವಿದೇಹಿ ಸ್ಥಿತಿಯ ಮೂಲಕ ಕರ್ಮಾತೀತರಾದರು, ಎಂದ ಮೇಲೆ ಅವ್ಯಕ್ತ ಬ್ರಹ್ಮಾನ ವಿಶೇಷ ಪಾಲನೆಯ ಪಾತ್ರರಾಗಿದ್ದೀರಿ ಆದ್ದರಿಂದ ಅವ್ಯಕ್ತ ಪಾಲನೆಯ ರೆಸ್ಪಾಂಡ್( ಪ್ರತಿಕ್ರಿಯೆ) ಕೊಡುವುದಾಗಿದೆ- ವಿದೇಹಿ ಆಗುವುದು. ಸೇವೆ ಹಾಗೂ ಸ್ಥಿತಿಯ ಸಮತೋಲನದ ಪ್ರತಿಕ್ರಿಯೆ. ಸರಿಯೇ, ಒಪ್ಪಿಗೆ ಇದೆಯೇ? ಮಾಡಲೇಬೇಕು. ಬಾಪ್ದಾದಾರವರು ಈ ರೀತಿ ಯೋಚಿಸುವುದಿಲ್ಲ- ನೋಡೋಣ, ಯೋಚಿಸೋಣ. ಇಲ್ಲ. ಮಾಡಲೇಬೇಕು. ನಿಮ್ಮ ಭಾಷೆಯಲ್ಲಿ ಹೇಳಿ- ಮಾಡಲೇಬೇಕು. ಯಾರೆಲ್ಲರೂ ಟಿವಿಯಲ್ಲಿ( ದೂರದರ್ಶನದಲ್ಲಿ) ನೋಡುತ್ತಿರುವಿರಿ ಅವರೆಲ್ಲರೂ ಸಹ ಈ ರೀತಿ ಹೇಳುತ್ತಿದ್ದೀರಲ್ಲವೇ? ಬಾಪ್ದಾದಾರವರು ನೋಡುತ್ತಿದ್ದಾರೆ. ಭಲೆ ಭಾರತದಲ್ಲಿ ನೋಡುತ್ತಿರಲಿ, ಅಥವಾ ವಿದೇಶಗಳಲ್ಲಿ ನೋಡುತ್ತಿರಲಿ ಆದರೆ ಎಲ್ಲರಿಗೂ ಉಮಂಗ ಬರುತ್ತಿದೆ- ನಾವು ಮಾಡುತ್ತೇವೆ, ನಾವು ಮಾಡುತ್ತೇವೆ ಎಂದು. ನಾವು ಮಾಡಲೇಬೇಕು. ಅಡ್ವಾನ್ಸ್ಆಗಿ (ಮುಂಚಿತವಾಗಿ) ಶುಭಾಶಯಗಳು. ಒಳ್ಳೆಯದು.

(ವಿದೇಶದ ಬಹಳಷ್ಟು ಸಹೋದರ ಸಹೋದರಿಯರು ಮೊದಲ ಬಾರಿ ಬಂದಿದ್ದಾರೆ, ರಿಟ್ರೀಟ್ ನಲ್ಲಿ ಬಂದಿರುವ ಗೆಸ್ಟ್ (ಅತಿಥಿಗಳು) ಸಹ ಕುಳಿತಿದ್ದಾರೆ)

ಬಹಳ ಒಳ್ಳೆಯದು. ಎಲ್ಲರೂ ನಂಬರ್ ಒನ್ ತೆಗೆದುಕೊಳ್ಳುವವರಾಗಿದ್ದಾರೆ. ಬಹಳ ಒಳ್ಳೆಯದು, ಅತಿಥಿಗಳಾಗಿ ಬಂದಿರಿ ಹಾಗೂ ತಂದೆಯ ಮಕ್ಕಳು ಅಧಿಕಾರಿ ಆಗಿಬಿಟ್ಟದ್ದೀರಿ. ಅಧಿಕಾರಿ ಆಗಿ ಬಿಟ್ಟಿದ್ದೀರಿ ಅಲ್ಲವೇ? ಅಧಿಕಾರಿಯಾಗಿದ್ದೀರಾ? ಬಹಳ ಒಳ್ಳೆಯದು, ಈಗ ಮುಂದುವರೆಯುತ್ತಾ ಹೋಗಿ.

ಆಸ್ಪತ್ರೆಯ ಟ್ರಸ್ಟಿಗಳೊಂದಿಗೆ:- ಎಲ್ಲರೂ ಡಬಲ್ ಟ್ರಸ್ಟಿ ಆಗಿದ್ದೀರಿ. ಒಂದು ಪ್ರವೃತ್ತಿಯಲ್ಲಿ ಇರುತ್ತಾ ಟ್ರಸ್ಟಿ ಹಾಗು ಎರಡನೆಯದು ಆಸ್ಪತ್ರೆಯಲ್ಲಿ ಇರುತ್ತಾ ಟ್ರಸ್ಟಿ. ಆಸ್ಪತ್ರೆಯಲ್ಲಿಯೂ ಟ್ರಸ್ಟಿ ಹಾಗೂ ಜೀವನದಲ್ಲಿಯೂ ಟ್ರಸ್ಟಿ. ಒಳ್ಳೆಯದು. ಆಸ್ಪತ್ರೆ ಆತ್ಮಗಳ ಸೇವೆಯು ಮಾಡುತ್ತಿದೆ ಹಾಗೂ ಶರೀರದ ಸೇವೆಯನ್ನು ಮಾಡುತ್ತಿದೆ. ಎಂದ ಮೇಲೆ ಡಬಲ್ ಸೇವೆ ಆಗುತ್ತಿದೆ ಹಾಗಾದರೆ ಯಾರು ನಿಮಿತ್ತ ಆಗಿರುವ ಆತ್ಮಗಳಾಗಿದ್ದೀರಿ ಅವರಿಗೂ ಡಬಲ್ ಆಶೀರ್ವಾದಗಳು ಸಿಗುತ್ತಾ ಇರುತ್ತದೆ. ಬಹಳ ಒಳ್ಳೆಯ ಯೋಜನೆಯನ್ನು ಮಾಡಿದ್ದೀರಿ ಅಲ್ಲವೇ. ಸೇವೆಯ ಚಾನ್ಸ್( ಅವಕಾಶ) ತೆಗೆದುಕೊಳ್ಳುವುದು ಎಂದರೆ ಚಾನ್ಸ್ಲರ್(ಕುಲಪತಿ) ಆಗುವುದು. ಆ ಚಾನ್ಸ್ಲರ್ ಅಲ್ಲ ಆತ್ಮಿಕ ಯುನಿವರ್ಸಿಟಿಯ (ವಿಶ್ವವಿದ್ಯಾಲಯದ) ಚಾನ್ಸ್ಲರ್. ಒಳ್ಳೆಯದು.

(ಆಸ್ಟ್ರೇಲಿಯಾದವರು ಒಲಂಪಿಕ್ ಆಟದ ಸಮಯ ದೊಡ್ಡ ಕಾರ್ಯಕ್ರಮವನ್ನು ಮಾಡುವ ಯೋಜನೆ ತಯಾರಿಸುತ್ತಿದ್ದರು, ಬಾಪ್ದಾದಾರವರಿಗೆ ಯೋಜನೆಯನ್ನು ತೋರಿಸಿದರು) ಎಲ್ಲಿ ಉಮಂಗ ಉತ್ಸಾಹ ಇದೆ ಹಾಗೂ ಎಲ್ಲರ ಏಕ ಮತವಿದೆ. ಎಂದ ಮೇಲೆ ಎಲ್ಲಿ ಏಕ ಮತ ಇದೆ ಹಾಗೂ ಉಮಂಗ ಉತ್ಸಾಹವಿದೆ ಸಫಲತೆಯಂತೂ ಇದ್ದೇ ಇದೆ. ಒಳ್ಳೆಯದು ಭಲೆ ಮಾಡಿ. ವಿದೇಶದಲ್ಲಿ ಹೆಸರುವಾಸಿಯನ್ನಾಗಿ ಮಾಡಿ. ಬಹಳ ಒಳ್ಳೆಯದು.

ಯಾರೆಲ್ಲರು ಭಾರತದಿಂದ ಬಂದಿದ್ದಾರೆ, ಭಾರತದವರಿಗಂತೂ ವಿಶೇಷ ನಶೆ ಇದೆ- ಬಾಪ್ದಾದಾರವರು ಭಾರತದಲ್ಲಿಯೇ ಅವತರಿತರಾಗುತ್ತಾರೆ ಹಾಗೂ ಜೊತೆ ಜೊತೆ ಮಿಲನ ಮಾಡಲು ಬರುತ್ತಾರೆಂದರೆ ಭಾರತದಲ್ಲಿಯೇ ಬರುತ್ತಾರೆ. ಎಂದ ಮೇಲೆ ಎರಡರಷ್ಟು ನಶೆ ಆಯಿತಲ್ಲವೇ! ಭಾರತದವರೇ ವಿದೇಶದಲ್ಲಿಯೂ ಸಂದೇಶವನ್ನು ಕೊಟ್ಟರು, ಹಾಗಾದರೆ ಭಾರತದವರು ವಿದೇಶದಲ್ಲಿಯೂ ಸಹ ತಮ್ಮ ಪರಿವಾರವನ್ನು ಹುಡುಕಿ ಒಂದು ಪರಿವಾರವನ್ನಾಗಿ ಮಾಡಿದರು, ಅದಕ್ಕಾಗಿಯೇ ಭಾರತವಾಸಿ ಮಕ್ಕಳದ್ದು ಸದಾ ಮಹತ್ವವಿದೆ ಹಾಗೂ ಭಾರತದ ಮಹತ್ವ ಹೆಚ್ಚಾಗಬೇಕಾದರೆ ಭಾರತ ವಾಸಿಗಳ ಮಹತ್ವವಂತು ಇದ್ದೇ ಇದೆ ಆದ್ದರಿಂದ ಯಾರೆಲ್ಲಾ ಹೊಸ, ಹಳೆಯ ಮಕ್ಕಳು ಬಂದಿದ್ದೀರಿ ಎಲ್ಲರೂ ಪ್ರೀತಿಯಿಂದ ತಲುಪಿದ್ದೀರಿ, ಬಾಪ್ದಾದಾರವರು ಎಲ್ಲಾ ಮಕ್ಕಳ ಸ್ನೇಹ ಹಾಗೂ ನಾಲ್ಕಾರು ಕಡೆಯ ಸೇವೆಯ ಸಹಯೋಗವನ್ನು ನೋಡಿ ಖುಷಿಯಾಗಿದ್ದಾರೆ ಹಾಗೂ ಮಕ್ಕಳು ಸಹ ಸದಾ ಖುಷಿಯಾಗಿದ್ದಾರೆ. ಖುಷಿಯಾಗಿರುತ್ತಿರಲ್ಲವೇ? ಎಂದು ಸಹ ಖುಷಿಯನ್ನು ಕಡಿಮೆ ಮಾಡಿಕೊಳ್ಳಬೇಡಿ. ಇದು ವಿಶೇಷವಾದ ತಂದೆಯ ಖಜಾನೆಯಾಗಿದೆ ಆದ್ದರಿಂದ ಎಂದೂ ಸಹ ಖುಷಿಯನ್ನು ಬಿಡಬೇಡಿ. ಸದಾ ಖುಷಿಯಾಗಿರಿ. ಒಳ್ಳೆಯದು.

ನಾಲ್ಕಾರು ಕಡೆಯ ಸರ್ವ ಶ್ರೇಷ್ಠ ಭಾಗ್ಯವಂತ, ಸರ್ವ ಶ್ರೇಷ್ಠ ಖಜಾನೆಗಳ ಮಾಲೀಕ, ಸದಾ ಸೇವೆ ಹಾಗೂ ಸ್ಥಿತಿಯ ಸಮತೋಲನವನ್ನು ಇಟ್ಟುಕೊಳ್ಳುವಂತಹ ಜ್ಞಾನಿತು ಆತ್ಮ, ಸರ್ವಶಕ್ತಿ ಸಂಪನ್ನ ಆತ್ಮಗಳಿಗೆ, ಸದಾ ಬಂಧನ ಮುಕ್ತ ಜೀವನ್ ಮುಕ್ತ ಆತ್ಮಗಳಿಗೆ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.

ವರದಾನ: ವರದಾನ: ಪರಮಾತ್ಮನ ಕಾರ್ಯದಲ್ಲಿ ಸಹಯೋಗಿಯಾಗಿದ್ದು ಸರ್ವರ ಸಹಯೋಗವನ್ನು ಪ್ರಾಪ್ತಿ ಮಾಡಿಕೊಳ್ಳುವ ಸಫಲತಾ ಸ್ವರೂಪ ಭವ.

ಎಲ್ಲಿ ಸರ್ವರ ಉಮ್ಮಂಗ-ಉತ್ಸಾಹವಿದೆಯೋ ಅಲ್ಲಿ ಸಫಲತೆಯು ತಾನಾಗಿಯೇ ಸಮೀಪಕ್ಕೆ ಬಂದು, ಕೊರಳಿನ ಮಾಲೆಯಾಗಿ ಬಿಡುತ್ತದೆ. ಯಾವುದೇ ವಿಶಾಲ ಕಾರ್ಯದಲ್ಲಿ ಪ್ರತಿಯೊಬ್ಬರ ಸಹಯೋಗದ ಬೆರಳು ಇರಬೇಕು. ಸೇವೆಯ ಅವಕಾಶವು ಪ್ರತಿಯೊಬ್ಬರಿಗೂ ಇದೆ, ಯಾವುದೇ ಕಾರಣಗಳನ್ನೂ ಕೊಡಲು ಸಾಧ್ಯವಿಲ್ಲ, ಏನೆಂದರೆ - ನಾನು ಮಾಡಲು ಸಾಧ್ಯವಿಲ್ಲ, ಸಮಯವಿಲ್ಲ ಎಂದು. ಏಳುತ್ತಾ-ಕುಳಿತುಕೊಳ್ಳುತ್ತಾ 10-10 ನಿಮಿಷವೂ ಸೇವೆಯನ್ನು ಮಾಡಿರಿ. ಆರೋಗ್ಯವು ಸರಿಯಿಲ್ಲವೆಂದರೆ ಮನೆಯಲ್ಲಿ ಕುಳಿತು ಮಾಡಿರಿ. ಮನಸ್ಸಾದಿಂದ, ಸುಖದ ವೃತ್ತಿ, ಸುಖಮಯ ಸ್ಥಿತಿಯಿಂದ ಸುಖಮಯ ಸಂಸಾರವನ್ನು ತಯಾರು ಮಾಡಿರಿ. ಪರಮಾತ್ಮನ ಕಾರ್ಯದಲ್ಲಿ ಸಹಯೋಗಿಯಾಗುತ್ತೀರೆಂದರೆ ಸರ್ವರ ಸಹಯೋಗವು ಸಿಗುತ್ತದೆ.

ಸ್ಲೋಗನ್: ಸ್ಲೋಗನ್: ಪ್ರಕೃತಿ ಪತಿಯ ಸ್ಥಾನದಲ್ಲಿ ಸ್ಥಿತರಾಗಿರುತ್ತೀರೆಂದರೆ ಪರಿಸ್ಥಿತಿಗಳಲ್ಲಿ ಅಪ್ಸೆಟ್ ಆಗುವುದಿಲ್ಲ.